**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –06 ಪಿ.ಡಬ್ಲ್ಯೂ -07

| | | |
|---|---|---|
| ಹೆಸರು | ಃ | ಪುತಳಾಬಾಯಿ |
| ತಂದೆಃ ಗಂಡ | ಃ | ರಾಜೇಂದ್ರ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ ೨೭.೦೨.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿ ನಂ.೧ ನನ್ನ ಅಳಿಯ, ಆರೋಪಿ ನಂ.೨ ಮತ್ತು ೩ ನನ್ನ ಮಗಳ ಅತ್ತೆ- ಮಾವ. ಚಾಸಾ-೧ ನನ್ನ ಮಗಳು. ಚಾಸಾ-2, 3, 7, 8, 10 ನನ್ನ ಭಾವನ ಮಕ್ಕಳು, ಚಾಸಾ-4 ನನ್ನ ನೆಗೇಣಿ, ಚಾಸಾ-5 ನನ್ನ ಭಾವ, ಚಾಸಾ-9 ನನ್ನ ಭಾವನ ಸೊಸೆ, ಚಾಸಾ-11 ನಾದಿನಿ, ಚಾಸಾ-12 ಭಾವ ಆಗಬೇಕು.

ನನ್ನ ಮಗಳು ಹೆರಿಗೆಗೆಂದು ಮನೆಗೆ ಬಂದಿದ್ದಳು. ನಾನು ಮನೆಯಲ್ಲಿ ಕೆಲಸ ಮಾಡುತ್ತಿದ್ದೆನು. ಆರೋಪಿ ನಂ.೧ ರಾಡಿನಿಂದ ಚಾಸಾ-೧ ರವರಿಗೆ ಹೊಡೆದನು, ಚಾಸಾ-೧ ಚೀರಲು ಆರಂಭಿಸಿದಳು, ಆಗ ನಾನು ಬಿಡಿಸಲು ಹೋದೆನು, ಆಗ ಆರೋಪಿ ನಂ.೧ ನನಗೂ ಹೊಡೆದಿರುತ್ತಾನೆ. ನಂತರ ಚಾಸಾ-೧ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಚಾಸಾ-೧ ರವರಿಗೆ ಒಳರೋಗಿಯಾಗಿ ಬಹಳ ದಿನ ಚಿಕಿತ್ಸೆ ಕೊಡಿಸಿರುತ್ತೇವೆ. ಚಾಸಾ-೧ ರವರನ್ನು ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಅಲ್ಲಿಯೂ ಚಾಸಾ-೧ ರವರಿಗೆ ಚಿಕಿತ್ಸೆ ಕೊಡಿಸಿರುತ್ತೇವೆ. ಸಾಕ್ಷಿ ಮು.ಮಾ-೧ ನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-೧ ರವರಿಗೆ ಆರೋಪಿ ನಂ.೧ ರವರು ಹೊಡೆದಾಗ ಮಗು 7 ತಿಂಗಳದ್ದು ಇತ್ತು. ಆರೋಪಿತರು ಚಾಸಾ-೧ ರವರಿಗೆ ಗಾಡಿ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು. ನ್ಯಾಯ ಪಂಚಾಯತಿ ಸಹ ಮಾಡಿದರೂ ಕೂಡ ಆರೋಪಿತರು ಚಾಸಾ-೧ ರವರನ್ನು ಸರಿಯಾಗಿ ನಡೆಸಿಕೊಂಡಿರುವುದಿಲ್ಲ, ಕಿರುಕುಳ ನೀಡಿರುತ್ತಾರೆ. ಎಷ್ಟು ಸಾರಿ ಕಳಿಸಿದರೂ ಕೂಡ ಚಾಸಾ-೧ ರವರನ್ನು ಸರಿಯಾಗಿ ನಡೆಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಆರೊಪಿ ನಂ.೨ ಮತ್ತು ೩ ರವರು ಚಾಸಾ-೧ ರವರಿಗೆ ನಿನಗೆ ಕೆಲಸ ಬರುವುದಿಲ್ಲ, ರಂಡಿ ಬೋಸಡಿ ಎಂದು ಬೈದು, ನೀನು ಮನೆ ಬಿಟ್ಟು ಹೋಗು ಎಂದು ಕಿರುಕುಳ ನೀಡಿರುತ್ತಾರೆ ಎಂಧರೆ ಸರಿ. ಆರೋಪಿ ನಂ.೧ ದಿ.09.09.2016 ರಂದು ಸಾಯಂಕಾಲ 5.00 ಗಂಟೆಗೆ ಮನೆಗೆ ಬಂದು ಚಾಸಾ-೧ ರವರಿಗೆ ರಂಡಿ ಬೋಸಡಿ ಗಾಡಿ ತೆಗೆದುಕೊಳ್ಳಲು ಹಣ ಕೊಡಿಸು ಎಂದರೆ ಕೊಡುಸುತ್ತಿಲ್ಲ ಎಂದು ಅಲ್ಲೇ ಬಿದ್ದಿದ್ದ ರಾಡಿನಿಂದ ಚಾಸಾ-೧ ರವರ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ ಎಂದರೆ ಸರಿ. ಚಾಸಾ-೧ ರವರ ಎಡಗೈ ಮಣಿಕಟ್ಟಿನ ಮೇಲೆ ಹೊಡೆದು ಭಾರಿಗಾಯಪಡಿಸಿರುತ್ತಾನೆ, ಕೈ ಮುರಿದು ನೆಲಕ್ಕೆ ಕೆಡವಿ ಕಾಲಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಅದೇ ರಾಡಿನಿಂದ ನನಗೆ ಬೆನ್ನಿಗೆ ಹೊಡೆದಿರುತ್ತಾನೆ ಎಂಧರೆ ಸರಿ. ಸದರಿ ಜಗಳವನ್ನು ಚಾಸಾ-5, 9, 11, 12 ರವರು ಸದರಿ ಜಗಳವನ್ನು ನೋಡಿ ಬಂದು ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿ ನಂ.೧ ಚಾಸಾ-೧ ರವರಿಗೆ ನಮ್ಮ ಮನೆಗೆ ಬಂದರೆ ಬಿಡುವುದಿಲ್ಲ ಜೀವ ಸಹಿತ ಖಲಾಸ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ನಾನು ಈ ರೀತಿ ಸರಕಾರಿ ಆಸ್ಪತ್ರೆ ಆಳಂದದಲ್ಲಿ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ನನಗೆ ಆರೋಪಿ ನಂ.೧ ಬೆನ್ನಿಗೆ ಹೊಡೆದ ಕಾರಣದಿಂದ ರಕ್ತಗಾಯ ಆಗಿತ್ತು. ಸದರಿ ರಕ್ತ ನಾನು ಧರಿಸಿದ ಬಟ್ಟೆಗೆ ಹತ್ತಿತ್ತು. ನಾನು ಸದರಿ ಗಾಯವನ್ನು ವೈದ್ಯರಿಗೆ ತೋರಿಸಿರುತ್ತೇನೆ. ಸದರಿ ರಕ್ತ ಹತ್ತಿದ ಬಟ್ಟೆಗಳನ್ನು ಪೋಲಿಸರು ಜಪ್ತಿಪಡಿಸಿಕೊಂಡಿರುತ್ತಾರೆ. ಆಳಂದ ಆಸ್ಪತ್ರೆಯನ್ನು ನಾವು ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಾವು ಆಸ್ಪತ್ರೆಗೆ ಹೋದ ದಿನದಂದೇ ಪೋಲಿಸರು ನಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾವು ಆಸ್ಪತ್ರೆಗೆ ಹೋದಾಗ ಸಂಜೆ ಆಗಿತ್ತು, ಸಮಯ ಎಷ್ಟಾಗಿತ್ತು ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನನ್ನ ಸಮಕ್ಷಮ ನನ್ನ ಮತ್ತು ಚಾಸಾ-೯ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೋಲಿಸರು ಹೇಳಿಕೆಯನ್ನು ಬರೆದುಕೊಂಡು ನನಗೆ ಓದಿ ಹೇಳಿರುವುದಿಲ್ಲ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ಚಾಸಾ-೧ ರವರಿಗೆ ಹೊಡೆಯುವ ಸಮಯದಲ್ಲಿ ನಾನು ಅಡುಗೆ ಮಾಡುತ್ತಿದ್ದೆ ಮತ್ತು ಬಟ್ಟೆ ತೊಳೆಯುತ್ತಿದ್ದೆ ಎಂದು ನುಡಿಯುತ್ತಾರೆ. ಬಟ್ಟೆಯನ್ನು ಹೊರಗಡೆ ನಳಕ್ಕೆ ಹೋಗಿ ತೊಳೆಯುತ್ತೇವೆ. ನಾವು ಬಟ್ಟೆ ತೊಳೆಯುವ ಜಾಗ ಎರಡು ಮನೆ ಬಿಟ್ಟು ಇದೆ. ಚಾಸಾ-೧ ರವರು ಚೀರುವ ಶಬ್ದವನ್ನು ಕೇಳಿ, ನಾನು, ಚಾಸಾ-೭, ಚಾಸಾ-೧೧, ಚಾಸಾ-೯, ಚಾಸಾ-೫, ಚಾಸಾ-೧೨ ರವರು ಬಂದಿರುತ್ತಾರೆ.

ಸದರಿ ಘಟನೆಯು ಒಂದು ಗಂಟೆವರೆಗೂ ಜರುಗಿರುತ್ತದೆ. ಸದರಿ ಮೇಲೆ ಹೇಳಿದ ಸಾಕ್ಷಿದಾರರು ಹೊಲಕ್ಕೆ ಹೋಗಿದ್ದರು, ನಂತರ ಬಂದಿರುತ್ತಾರೆ. ಸದರಿ ಚಾಸಾ-೧ ರವರಿಗೆ ರಕ್ತಗಾಯವಾಗಿತ್ತು ಎಂದು ಹೇಳುತ್ತಿರಲ್ಲ, ಸದರಿ ರಕ್ತ ನೆಲದ ಮೇಲೆ ಬಿದ್ದಿತ್ತಾ ಮತ್ತು ಬಟ್ಟೆಗಳ ಮೇಲೆ ಬಿದ್ದಿತ್ತಾ ಎಂದರೆ ಬಿದ್ದಿತ್ತು

ಎಂದು ನುಡಿಯುತ್ತಾರೆ. ನಾನು ಬಿಡಿಸಲು ಹೋದಾಗ ಚಾಸಾ-೧ ರವರಿಗೆ ಮೊಳಕಾಲಿಗೆ ಹೊಡೆದಿರುತ್ತಾರೆ, ಮೊದಲು ತಲೆಗೆ ಹೊಡೆದು ರಕ್ತಗಾಯಪಡಿಸಿದ್ದನು. ತಲೆಗೆ ಹೊಡೆದದ್ದನು ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು ನಾನು ಹೋಗುವಷ್ಟರಲ್ಲಿ ಹೊಡೆದಿದ್ದನು ಎಂದು ನುಡಿಯುತ್ತಾರೆ. ನನ್ನ ಎದುರಿಗೆ ಆರೋಪಿ ನಂ.೧ ಚಾಸಾ-೧ ರವರಿಗೆ ಮೊಳಕಾಲಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಯಾವತ್ತು ಚಾಸಾ-೧ ರವರಿಗೆ ವಾಹನ ತೆಗೆದುಕೊಳ್ಳುವುದಿದೆ ಹಣ ತೆಗೆದುಕೊಂಡು ಬಾ ಎಂದು ಯಾವತ್ತು ಕಿರುಕುಳ ಕೊಟ್ಟಿರುವುದಿಲ್ಲ ಎಂದರೆ ಸರಿ ಅಲ್ಲ. ಚಾಸಾ-೧ ರವರು ಹೇಳದೇ ಕೇಳದೆ ತಿಂಗಳಾನುಗಟ್ಟೆಲೆ ಇರುತ್ತಾಳೆ ಎಂದರೆ ಸರಿ ಅಲ್ಲ. ಚಾಸಾ-೧ ರವರನ್ನು ಕರೆಯಲು ಆರೋಪಿ ನಂ.೧ ಮನೆಗೆ ಬಂದಿದ್ದನು ಎಂದರೆ ಸರಿ. ಸಾಕ್ಷಿ ಮುಂದುವರೆದು ಕರೆಯಲು ಬಂದಾಗಲೇ ಜಗಳ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಚಾಸಾ-೧ ರವರು ಆರೋಪಿ ನಂ.೧ ರವರ ಜೊತೆ ಹೋಗಬಾರದೆನ್ನುವ ಉದ್ದೇಶದಿಂದ ನೆವ ಮಾಡಿರುತ್ತಾಳೆ, ಆರೋಪಿ ನಂ.೧ ಯಾವತ್ತೂ ಹೊಡೆದಿರುವುದಿಲ್ಲ ಎಂದರೆ ಸರಿ ಅಲ್ಲ.

ನನ್ನ ಮಗಳು ಹೆರಿಗೆಗೆಂದು ಮನೆಗೆ ಬಂದಿದ್ದಳು. ನಾನು ಮನೆಯಲ್ಲಿ ಕೆಲಸ ಮಾಡುತ್ತಿದ್ದೆನು. ಆರೋಪಿ ನಂ.೧ ರಾಡಿನಿಂದ ಚಾಸಾ-೧ ರವರಿಗೆ ಹೊಡೆದನು, ಚಾಸಾ-೧ ಚೀರಲು ಆರಂಭಿಸಿದಳು, ಆಗ ನಾನು ಬಿಡಿಸಲು ಹೋದೆನು, ಆಗ ಆರೋಪಿ ನಂ.೧ ನನಗೂ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಂತರ ಚಾಸಾ-೧ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು, ಚಾಸಾ-೧ ರವರಿಗೆ ಒಳರೋಗಿಯಾಗಿ ಬಹಳ ದಿನ ಚಿಕಿತ್ಸೆ ಕೊಡಿಸಿರುತ್ತೇವೆ, ಚಾಸಾ-೧ ರವರನ್ನು ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಅಲ್ಲಿಯೂ ಚಾಸಾ-೧ ರವರಿಗೆ ಚಿಕಿತ್ಸೆ ಕೊಡಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೧ ರವರಿಗೆ ಆರೋಪಿ ನಂ.೧ ರವರು ಹೊಡೆದಾಗ ಮಗು ೭ ತಿಂಗಳದ್ದು ಇತ್ತು, ಆರೋಪಿತರು ಚಾಸಾ-೧ ರವರಿಗೆ ಗಾಡಿ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು, ನ್ಯಾಯ ಪಂಚಾಯತಿ ಸಹ ಮಾಡಿದರೂ ಕೂಡ ಆರೋಪಿತರು ಚಾಸಾ-೧ ರವರನ್ನು ಸರಿಯಾಗಿ ನಡೆಸಿಕೊಂಡಿರುವುದಿಲ್ಲ, ಕಿರುಕುಳ ನೀಡಿರುತ್ತಾರೆ, ಎಷ್ಟು ಸಾರಿ ಕಳಿಸಿದರೂ ಕೂಡ ಚಾಸಾ-೧ ರವರನ್ನು ಸರಿಯಾಗಿ ನಡೆಸಿಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೋಪಿ ನಂ.೨ ಮತ್ತು ೩ ರವರು ಚಾಸಾ-೧ ರವರಿಗೆ ನಿನಗೆ ಕೆಲಸ ಬರುವುದಿಲ್ಲ, ರಂಡಿ ಬೋಸಡಿ ಎಂದು ಬೈದು, ನೀನು ಮನೆ ಬಿಟ್ಟು ಹೋಗು ಎಂದು ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ದಿ.09.09.2016 ರಂದು ಸಾಯಂಕಾಲ 5.00 ಗಂಟೆಗೆ ಮನೆಗೆ ಬಂದು ಚಾಸಾ-೧ ರವರಿಗೆ ರಂಡಿ ಬೋಸಡಿ ಗಾಡಿ ತೆಗೆದುಕೊಳ್ಳಲು ಹಣ ಕೊಡಿಸು ಎಂದರೆ ಕೊಡುಸುತ್ತಿಲ್ಲ ಎಂದು ಅಲ್ಲೇ ಬಿದ್ದಿದ್ದ ರಾಡಿನಿಂದ ಚಾಸಾ-೧ ರವರ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೧ ರವರ ಎಡಗೈ ಮಣಿಕಟ್ಟಿನ ಮೇಲೆ ಹೊಡೆದು ಭಾರಿಗಾಯಪಡಿಸಿರುತ್ತಾನೆ, ಕೈ ಮುರಿದು ನೆಲಕ್ಕೆ ಕೆಡವಿ ಕಾಲಿಗೆ ಹೊಡೆದಿರುತ್ತಾನೆ, ಅದೇ ರಾಡಿನಿಂದ ನನಗೆ ಬೆನ್ನಿಗೆ ಹೊಡೆದಿರುತ್ತಾನೆ, ಸದರಿ ಜಗಳವನ್ನು ಚಾಸಾ-5, 9, 11, 12 ರವರು ಸದರಿ ಜಗಳವನ್ನು ನೋಡಿ ಬಂದು ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ಚಾಸಾ-೧ ರವರಿಗೆ ನಮ್ಮ ಮನೆಗೆ ಬಂದರೆ ಬಿಡುವುದಿಲ್ಲ ಜೀವ ಸಹಿತ ಖಲಾಸ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ, ನಾನು ಈ ರೀತಿ ಸರಕಾರಿ ಆಸ್ಪತ್ರೆ ಆಳಂದದಲ್ಲಿ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ